# ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.

ಸಂಖ್ಯೆ:PUE/DMC/ONLINE-MC-VERI/2019-20 ದಿನಾಂಕ:17-12-2019.

## ::ಸುತ್ತೋಲೆ::

ವಿಷಯ: ದ್ವಿತೀಯ ಪಿ ಯು ಸಿ ವಿದ್ಯಾರ್ಥಿಗಳ ಅಂಕಪಟ್ಟಿ ನೈಜತೆ ಪರಿಶೀಲನೆಯನ್ನು ಆನ್‌ಲೈನ್ ಮುಖಾಂತರ ನಿರ್ವಹಿಸುವ ಬಗ್ಗೆ.

ಉಲ್ಲೇಖ: ಮಾನ್ಯ ಮುಖ್ಯ ಕಾರ್ಯದರ್ಶಿಗಳ ನಿರ್ದೇಶನ ಮತ್ತು ಪ್ರಗತಿ-12 ಯೋಜನೆಯಡಿಯಲ್ಲಿ ಅನುಷ್ಠಾನದಂತೆ.

******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಪದವಿ ಪೂರ್ವ ಶಿಕ್ಷಣ ಇಲಾಖೆಯ ದ್ವಿತೀಯ ಪಿ ಯು ಸಿ ವಿದ್ಯಾರ್ಥಿಗಳ ಅಂಕಪಟ್ಟಿಯ ನೈಜತೆಯನ್ನು ಇನ್ನು ಮುಂದೆ ಆನ್‌ಲೈನ್ ಮುಖಾಂತರ ನಿರ್ವಹಿಸುವ ವ್ಯವಸ್ಥೆಯನ್ನು ಕಲ್ಪಿಸಲು ಉದ್ದೇಶಿಸಲಾಗಿದೆ. ಪ್ರಸುತ್ತ ನೇಮಕಾತಿ ಅಥವಾ ಮುಂದಿನ ವಿದ್ಯಾಭ್ಯಾಸದ ಪ್ರವೇಶಕ್ಕೆ ಅಂಕಪಟ್ಟಿ ನೈಜತೆ ಪ್ರಮಾಣ ಪತ್ರ ಪಡೆಯಲಿಚ್ಚಿಸುವ ನೇಮಕಾತಿ/ಸಕ್ಷಮ ಪ್ರಾಧಿಕಾರ ಹಾಗೂ ವ್ಯಕ್ತಿಗಳು ಅಂಚೆ ಮೂಲಕ ಅಂಕಪಟ್ಟಿಯೊಂದಿಗೆ ಈ ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿತ್ತು. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಇಲಾಖೆಯ ದಾಖಲೆಗಳೊಡನೆ ಮೂಲ ಅಂಕಪಟ್ಟಿಯನ್ನು ತಾಳೆ ಮಾಡಿ ನಂತರ ನೈಜತೆ ಪ್ರಮಾಣ ಪತ್ರವನ್ನು ಸಂಬಂಧಪಟ್ಟವರಿಗೆ ರವಾನಿಸುವ ಪದ್ಧತಿ ಜಾರಿಯಲ್ಲಿತ್ತು. ಈ ರೀತಿಯ ಪತ್ರವ್ಯವಹಾರವನ್ನು ತಡೆಗಟ್ಟಿ ಅರ್ಜಿದಾರರು ಇದ್ದಲ್ಲಿಯೇ ಸದರಿ ಸೇವೆಯನ್ನು ಆನ್‌ಲೈನ್ ಮೂಲಕ ಪಡೆಯಲು ಈ ನೂತನ ಸೌಲಭ್ಯವನ್ನು ಕಲ್ಪಿಸಲಾಗಿದೆ.

### ::ಇನ್ನು ಮುಂದೆ ದ್ವಿತೀಯ ಪಿ ಯು ಸಿ ವಿದ್ಯಾರ್ಥಿಗಳ ಅಂಕಪಟ್ಟಿ ನೈಜತೆ ಪರಿಶೀಲನೆಯನ್ನು ಆನ್‌ಲೈನ್ ಮೂಲಕ ಪಡೆಯಲು ಅನುಸರಿಸಬೇಕಾದ ವಿಧಾನ::

ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಾಲತಾಣ **http://www.pue.kar.nic.in** ರ ಮೂಲಕ ನೇರವಾಗಿ ಅಂಕಪಟ್ಟಿ ನೈಜತೆ ಪ್ರಮಾಣ ಪತ್ರ ಬಯಸುವ ನೇಮಕಾತಿ/ಸಕ್ಷಮ ಪ್ರಾಧಿಕಾರವು ಅಥವಾ ವ್ಯಕ್ತಿಗಳು ಮನವಿಯನ್ನು ಸಲ್ಲಿಸಬಹುದಾಗಿದೆ. Covering letter ಮತ್ತು ಅಂಕಪಟ್ಟಿಯನ್ನು ಪಿಡಿಎಫ್‌ನಲ್ಲಿ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಿದ ನಂತರ ಜಾಲತಾಣದಲ್ಲಿ ನಮೂದಿಸಿರುವ ಮೊಬೈಲ್ ಸಂಖ್ಯೆಗೆ ಸಂದೇಶವನ್ನು ರವಾನಿಸಲಾಗುತ್ತದೆ. ಈ ಸಂದೇಶವನ್ನು ಸ್ವೀಕರಿಸಿದ ನಂತರ ಅರ್ಜಿಸಂಖ್ಯೆಯನ್ನು ನಮೂದಿಸಿ ನೈಜತೆಯ ಬಗ್ಗೆ ಸೃಜಿಸಲಾದ ಪ್ರಮಾಣಪತ್ರವನ್ನು ಪಡೆಯಬಹುದು.

**ಆನ್‌ಲೈನ್ ಅಂಕಪಟ್ಟಿ ನೈಜತೆ ಪರಿಶೀಲನೆ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ:**

**ಅರ್ಜಿದಾರರು ಅನುಸರಿಸಬೇಕಾದ ಕ್ರಮಗಳು:**

1. ಅಂಕಪಟ್ಟಿಯ ನೈಜತೆಯ ಪರಿಶೀಲನೆಗೆ ಅರ್ಜಿ ಸಲ್ಲಿಸಲು ಅರ್ಜಿದಾರರು http://www.pue.kar.nic.in ವೈಬ್‌ಸೈಟ್‌ನಲ್ಲಿ Requester details ಅನ್ನು ಕ್ಲಿಕ್ ಮಾಡಿ ಸೂಕ್ತ Organisation/department ನಮೂದಿಸಿದ ನಂತರ ಸದರಿ ಅರ್ಜಿದಾರರ ಸಂಬಂಧಿಸಿದ ಮಾಹಿತಿಗಳನ್ನು ನಮೂದಿಸಬೇಕು.
2. Generate OTP ಅನ್ನು ಕ್ಲಿಕ್ ಮಾಡಿ ಅರ್ಜಿದಾರರ ಮೊಬೈಲ್ ಸಂಖ್ಯೆಯಲ್ಲಿ ಸ್ವೀಕೃತವಾದ OTP ಅನ್ನು ನಮೂದಿಸಿ Validate ಮಾಡುವುದು.
3. ಅರ್ಜಿದಾರರು ಸಂಬಂಧಪಟ್ಟ covering letter ಅನ್ನು PDF ನಮೂನೆಯಲ್ಲಿ(500KB to 1MB) ಅಪ್ಲೋಡ್ ಮಾಡಿದ ನಂತರ generate ಆಗುವ ಆಪ್ಲಿಕೇಶನ್ ನಂಬರ್ ಅನ್ನು ಮುಂದಿನ ಯಾವುದೇ ಮಾಹಿತಿಗಾಗಿ ಸುರಕ್ಷಿತವಾಗಿ ಇಟ್ಟುಕೊಳ್ಳುವುದು.
4. ಎಸ್ ಎಂ ಎಸ್ ಮುಖಾಂತರ ಬಂದಿರುವ ಆಪ್ಲಿಕೇಶನ್ ನಂಬರ್‌ನ್ನು ನಮೂದಿಸಿ "Click here to enter markscard details" ನ್ನು click ಮಾಡಿ, ಅಂಕಪಟ್ಟಿಗೆ ಸಂಬಂಧ ಮಾಹಿತಿಗಳನ್ನು ನಮೂದಿಸುವುದು ಹಾಗೂ ಅಂಕಪಟ್ಟಿಯನ್ನು scan ಮಾಡಿ (PDF ನಮೂನೆಯಲ್ಲಿ 500KB to 1MB format ನಲ್ಲಿ) ಅಪ್ಲೋಡ್ ಮಾಡಿದ ನಂತರ "Save" click ಮಾಡಿವುದು.
5. ಅರ್ಜಿದಾರರ ಮೊಬೈಲ್ ಸಂಖ್ಯೆಗೆ "your report is ready to download" ಎಂದು ಮೆಸ್ಸೇಜ್ ಬಂದ ನಂತರ ಅರ್ಜಿದಾರರು ವರದಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವುದು. ಒಂದುವೇಳೆ Reject ಆದ ಸಂದರ್ಭದಲ್ಲಿ Reject ಗೆ ನೀಡಿರುವ ಕಾರಣಾನುಸಾರ ದಾಖಲಾತಿಗಳನ್ನು ಪುನಃ ಅಪ್ಲೋಡ್ ಮಡಲು ಅವಕಾಶ ಕಲ್ಪಿಸಲಾಗಿದೆ.
6. ಪ್ರಕ್ರಿಯೆಯ ಪ್ರತೀ ಹಂತದಲ್ಲಿಯೂ ಎಸ್‌ಎಂಎಸ್ ಆಧಾರಿತ ಮಾಹಿತಿಯನ್ನು ಪಡೆಯುವಂತೆ ವ್ಯವಸ್ಥೆ ಮಾಡಲಾಗಿದೆ.
7. ಮೇಲ್ಕಂಡ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಲು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರು, ವಿದ್ಯಾರ್ಥಿಗಳು/ಪೋಷಕರುಗಳಿಗೆ ವ್ಯಾಪಕ ಪ್ರಚಾರ ನೀಡಲು ತಿಳಿಸಿದೆ.

M. Kanagavalli

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಯನ್ನು:

1. ರಾಜ್ಯದ ಎಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ–ಮುಂದಿನ ಸೂಕ್ತ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಕಾಲೇಜುಗಳ ಪ್ರಾಂಶುಪಾಲರಿಗೆ–ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಸಹಾಯಕ ನಿರ್ದೇಶಕರು, ಇ–ಆಡಳಿತ, ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು– ಇಲಾಖೆಯ ವೈಬ್‌ಸೈಟ್‌ನಲ್ಲಿ ಪ್ರಕಟಿಸಲು.
4. ಕಚೇರಿ ಪ್ರತಿ.
5. ಸಂಬಂದಿಸಿದ ಎಲ್ಲಾ ಇಲಾಖೆಗಳಿಗೆ.